**ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯಃ ಕೋಲಾರ**

**ಸ್ಪೆಷಲ್ ಸಿ. ಎಸ್ ಸಿ/ ಎಸ್ ಟಿ ನಂ. 22/2022**

ಪ್ರಾಸಾಃ 1 (ಚಾಸಾಃ1 )

ಪ್ರಮಾಣೀಕರಿಸಿದ ದಿಃ 04.03.2023

ಹೆಸರು : ಶ್ರೀನಿವಾಸ

ತಂದೆಯ ಹೆಸರು ಃ ಸಂಪೆಂಗಪ್ಪ

ವಯಸ್ಸು ಃ 48 ವರ್ಷ

ಕೆಲಸ ಃ ಲೈನ್‌ಮ್ಯಾನ್ , ಬೆಸ್ಕಾಂ ,

ವಾಸ ಃ ಮಾದನಹಟ್ಟಿ ಗ್ರಾಮ, ಮಾಲೂರು ತಾಲ್ಲೂಕು.

**ಮುಖ್ಯ ವಿಚಾರಣೆ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ಚೇತನ್, ಚರಣ್, ನಾಗರಾಜ್, ಚಂದ್ರು ಗೊತ್ತು. ಈಗ ನ್ಯಾಯಾಲಯದ ಮುಂದಿರುವ 9 ಜನ ಆರೋಪಿತರು ಗೊತ್ತಿದೆ. ನಾನು ಬೋವಿ ಜನಾಂಗದವರಾಗಿದ್ದೇನೆ. ಆರೋಪಿತರು ಯಾದವ ಜಾತಿಯವರಾಗಿರುತ್ತಾರೆ.

ನಾನು ಬೆಂಗಳೂರು ಕೆ.ಇ.ಬಿ ಯಲ್ಲಿ ಮಾರ್ಗದಾಳುವಾಗಿ ಕೆಲಸ ಮಾಡುತ್ತಿದ್ದೇನೆ. ದಿನಾಂಕ 13/04/2022 ರಂದು ರಾತ್ರಿ ಪಾಳಿ ಮುಗಿದ ನಂತರ ಮಧ್ಯಾಹ್ನ 12.30 ಗಂಟೆಗೆ ನಾನು ಮನೆಗೆ ಬಂದೆ. ನಾನು ಬಟ್ಟೆ ಬದಲಾಯಿಸಿ ಊಟ ಮಾಡುವ ಸಮಯದಲ್ಲಿ ನಮ್ಮ ಜಮೀನಿನ ಕಡೆಯಿಂದ ಕೂಗಾಟಗಳು ಕೇಳಿಸಿತು. ನಾನು ಅಲ್ಲಿಗೆ ಹೋದೆ. ನಾನು ಅಲ್ಲಿಗೆ ಹೋಗಿ ನೋಡಿದಾಗ ನನ್ನ ಅಣ್ಣ ನಾಗರಾಜ ಮತ್ತು ನನ್ನ ಮಕ್ಕಳಾದ ಚೇತನ್, ಚರಣ್ ಮತ್ತು ಬಾವನಾದ ಸಿದ್ದಲಿಂಗಪ್ಪ, ಚಂದ್ರು ನಮ್ಮ ಜಮೀನಿನಲ್ಲಿ ಚಪ್ಪಡಿಗಳನ್ನು ಕಟ್ ಮಾಡುತ್ತಿದ್ದರು. ನಮ್ಮ ಜಮೀನಿಗೆ ಕಾಪೌಂಡ್ ಹಾಕುವ ಉದ್ದೇಶದಿಂದ ಕಲ್ಲು ಗಳನ್ನು ಕಟ್ ಮಾಡುತ್ತಿದರು.

ಆಗ 9 ಜನ ಆರೋಪಿತರು ಅಲ್ಲಿ ಕೂಗಾಡುತ್ತಿದ್ದರು. ಏಕೆ ನನ್ನ ಮಕ್ಕಳ ಮೇಲೆ ಗಲಾಟೆ

ಮಾಡುತ್ತಿದ್ದೀರಾ ಎಂದು ಕೇಳಿದಾಗ ಆರೋಪಿ ಕಿಶೋರ ನನಗೆ ದೊಣ್ಣೆಯಿಂದ ಬಲ ಭುಜಕ್ಕೆ ಹೊಡೆದ . ಅರುಣ್ ನನ್ನ ಎದೆಗೆ ಒದ್ದ. ವೆಂಕಟೇಶಪ್ಪ ಬೋವಿ ನನ್ನ ಮಕ್ಕಳಾ ನಿಮ್ಮನ್ನು ಸಾಯಿಸುತ್ತೇವೆಂದು ಹೇಳಿ ಕಲ್ಲಿನಿಂದ ಬಲತಲೆಗೆ ಹೊಡೆದ. ನನಗೆ ರಕ್ತ ಗಾಯಗಳಾದವು. ನನ್ನ ಮಗ ನನ್ನನ್ನು ದ್ವಿಚಕ್ರ ವಾಹನದಲ್ಲಿ ಸರ್ಕಾರಿ ಆಸ್ಪತ್ರೆಗೆ ಸೇರಿಸಿದ. ನನ್ನ ತಲೆಗಾಗಿದ್ದ ಗಾಯಕ್ಕೆ ಹೊಲಿಗೆ ಹಾಕಿ ಚಿಕಿತ್ಸೆ ಮಾಡಿಸಿದರು. ಎಸ್ಸೆನ್ನಾರ್ ಆಸ್ಪತ್ರೆಗೆ ಸ್ಕ್ಯಾನ್ ಮಾಡಲು ಕಳುಹಿಸಿದರು. ನಾನು ಎಸ್ಸೆನ್ನಾರ್ ಆಸ್ಪತ್ರೆಯಲ್ಲಿದ್ದಾಗ ರಾತ್ರಿ 9.30 ಗಂಟೆಗೆ ಪೊಲೀಸರು ಬಂದು ನನ್ನ ದೂರನ್ನು ಬರೆದುಕೊಂಡರು. ನನ್ನ ದೂರನ್ನು ಈಗ ನೋಡುತ್ತಿದ್ದೇನೆ. ಸಾಕ್ಷಿ ಗುರುತಿಸಿದ ಫಿರ್ಯಾದನ್ನು ನಿ.ಪಿ.1 ಎಂದು, ಸಾಕ್ಷಿ ಸಹಿಯನ್ನು ನಿ.ಪಿ.1 ಎ ಎಂದು ಗುರುತಿಸಲಾಯಿತು. ಈಗ ನನಗೆ ಹೊಡೆಯಲು ಉಪಯೋಗ ಮಾಡಿದ ದೊಣ್ಣೆ ಬಿದಿರಿನ ಕೋಲು ಮತ್ತು ಹಿಡಿ ಗಾತ್ರದ ಕಲ್ಲನ್ನು ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೆ. ಸಾಕ್ಷಿ ಗುರುತಿಸಿದ ಒಂದು ಬಿದಿರಿನ ಕೋಲನ್ನು ಮುಮಾ 1 ಎಂದು, ಹಿಡಿಗಾತ್ರದ ಸಣ್ಣ ಕಲ್ಲನ್ನು ಮುಮಾ 2 ಎಂದು ಗುರುತಿಸಲಾಯಿತು. ಅವುಗಳಿಂದ ಆ ದಿವಸ ನನ್ನನ್ನು ಹೊಡೆದಿದ್ದರು. ನಿಮ್ಮನ್ನು ಊರಿನಿಂದ ಓಡಿಸಿ, ನಿನ್ನ ನೌಕರಿಯನ್ನು ತೆಗೆಸಿ ಹಾಕುತ್ತೆವೆಂದು ಮತ್ತು ಸಾಯಿಸುತ್ತೇವೆಂದು ಹೆದರಿಸಿದರು. ಈ ಎಲ್ಲಾ ವಿಚಾರಗಳನ್ನು ನಾನು ಪೊಲೀಸರಿಗೆ ಹೇಳಿ ಬರೆಸಿದ್ದೆ. ಆ ದಿವಸ ನಮ್ಮ ವಿರುದ್ದ ಗಲಾಟೆ ಮಾಡಿದ ವ್ಯಕ್ತಿಗಳು ಈಗ ನ್ಯಾಯಾಲಯದ ಮುಂದೆ ಇರುವ 1 ರಿಂದ 9 ನೇ ಆರೋಪಿತರಾಗಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಸಿ ಎಸ್ ವಕೀಲರಿಂದಃ**

ಅದರ ಹಿಂದಿನ ದಿವಸ ಸಂಜೆ 4.00 ಗಂಟೆಗೆ ನಾನು ಬೆಂಗಳೂರಿಗೆ ರಾತ್ರಿ ಪಾಳಿಯ ಕೆಲಸಕ್ಕೆ ಹೋಗಿದ್ದೆ. ಮರುದಿನ ಬೆಳಗ್ಗೆ 9.00 ಗಂಟೆವರೆಗೆ ರಾತ್ರಿ ಪಾಳಿಯ ಕೆಲಸ ಇತ್ತು. ನಾನು ಕೆಲಸಕ್ಕೆ ಹಾಜರಾಗಿದ್ದಕ್ಕೆ ಹಾಜರಾತಿಯನ್ನು ಕೊಡುತ್ತಾರೆ. ಆ ದಿವಸ ಬಳೆಗ್ಗೆ 9.00 ಗಂಟೆಗೆ ಬೆಂಗಳೂರಿನಿಂದ ಹೊರಟು ಬಂದೆ. ನಾನು ದ್ವಿಚಕ್ರ ವಾಹನದಲ್ಲಿ ಬೆಂಗಳೂರಿನಿಂದ ಬಂದೆ. ಗಲಾಟೆ ಶಬ್ದ ಕೇಳಿ ನಾನು ಅಲ್ಲಿಗೆ ಹೋಗಿದ್ದೆ. ಸುತ್ತ ಮುತ್ತ ಊರಿನಲ್ಲಿ ಮನೆಗಳು ಇವೆ ಎಂದರೆ ಸರಿ. ಬಹಳ ಜನಗಳು ಸೇರಿಕೊಂಡಿದ್ದರು. ಆ ಜಾಗದ ಸರ್ವೆ ನಂ. 8/2 ಆಗಿರುತ್ತದೆ. ನನಗೆ ಸರ್ವೆ ನಂಬರನ್ನು ಸ್ಪಷ್ಟವಾಗಿ ಹೇಳಲಾಗುವುದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನಾವು ಪೊಲೀಸರಿಗೆ ಕೊಟ್ಟ ಪಹಣಿಯಲ್ಲಿ ಸರ್ವೆ ನಂ.2/8 ಎಂದು ನಮೂದಿದೆ ಎಂದರೆ ಸರಿ. ಸರ್ವೆ ನಂ. 2/8 ರಲ್ಲಿ 8 ಗುಂಟೆ ನಮೂದಿದೆ ಎಂದರೆ ಸರಿ. ಪದ್ಮಾವತಿ, ಶಿಲ್ಪ, ವೆಂಕಟೇಶಪ್ಪ ರವರ ವಿರುದ್ಧ ಜಮೀನಿನ ವಿಚಾರವಾಗಿ ದಾವೆಯನ್ನು ಹಾಕಿದ್ದೇವೆಂದರೆ ಸರಿ. ಸದರಿ ದಾವೆಯ ಜಮೀನು ಕಾಂಪೌಂಡ್ ನಿಲ್ಲಿಸಲು ಗಲಾಟೆ ಆದ ಜಾಗ ಎಂದರೆ ಸರಿಯಲ್ಲ. ಸರ್ವೆ ನಂ.2/1 ಪದ್ಮಾವತಿರವರ ಜಮೀನು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಜಮೀನನ್ನು 1974 ರಲ್ಲಿ ನನ್ನ ತಂದೆ ಸಂಪೆಂಗಪ್ಪ ಕೊಂಡುಕೊಂಡಿದ್ದಾರೆಂದು ನುಡಿಯುತ್ತಾರೆ. ಸರ್ವೆ ನಂ. 2/1 ರ ಜಮೀನಿಗೆ ಒಎಸ್ ನಂ.26/2022 ನ್ನು ಸಲ್ಲಿಸಲಾಗಿದೆ ಎಂದರೆ ಸರಿ. ವೆಂಕಟೇಶಪ್ಪ ಸದರಿ ಜಮೀನನ್ನು ಕೊಂಡುಕೊಂಡಿದ್ದಾನೆ ಎನ್ನುವುದು ಸರಿಯಲ್ಲ.

ಕಾಂಪೌಂಡ್ ನಿರ್ಮಿಸಲು ಕಲ್ಲುಗಳನ್ನು ಕಟ್ ಮಾಡುತ್ತಿದ್ದ ಜಾಗ ವೆಂಕಟೇಶಪ್ಪ ನ ಜಾಗ ಎಂದರೆ ಸರಿಯಲ್ಲ. ಸದರಿ ಜಮೀನಿನಲ್ಲಿ ವೆಂಕಟೇಶಪ್ಪ ಅನುಬವದಲ್ಲಿದ್ದಾನೆ ಎಂದರೆ ಸರಿಯಲ್ಲ.

ರಕ್ತ ಕಲೆಯಾಗಿದ್ದ ಬಟ್ಟೆಗಳನ್ನು ಪೊಲೀಸರು ನನ್ನಿಂದ ಪಡೆದುಕೊಂಡಿಲ್ಲ. ಆಸ್ಪತ್ರೆಗೆ ಹೋದಾಗ 1.30 ಗಂಟೆ ಆಗಿತ್ತು. ಮಾಲೂರಿನ ಆಸ್ಪತ್ರೆಯಲ್ಲಿ ತಲೆಯ ಗಾಯಕ್ಕೆ ಉಪಚಾರ ಮಾಡಿ ಕೋಲಾರ ಎಸ್ಸೆನ್ನಾರ್ ಆಸ್ಪತ್ರೆಗೆ ಕಳುಹಿಸಿದರು. ಮಾಲೂರಿನ ಆಸ್ಪತ್ರೆಯಲ್ಲಿ ಪೊಲೀಸರು ಬಂದಿರಲಿಲ್ಲ. ಮಾಲೂರಿನ ಆಸ್ಪತ್ರೆಯಲ್ಲಿ ವೈದ್ಯರಿಗೆ ಗಲಾಟೆ ಅಗಿದ್ದ ಬಗ್ಗೆ ಹೇಳಿದ್ದೆ.

ಕೋಲಾರದ ಆಸ್ಪತ್ರೆಗೆ ನಾನು, ನನ್ನ ಮಗ, ನನ್ನ ಮಗನ ಸ್ನೇಹಿತ ಬಂದೆವು. ಆಸ್ಪತ್ರೆಯಲ್ಲಿ ನನ್ನ ಹೇಳಿಕೆಯನ್ನು ಮಾತ್ರ ಪೊಲೀಸರು ಪಡೆದುಕೊಂಡರು. ಕಿಶೋರನು ನಾನು ಹೇಳಿದಂತೆ ನನಗೆ ದೊಣ್ಣೆಯಿದ ಹೊಡೆದಿಲ್ಲ ಎಂದರೆ ಸರಿಯಲ್ಲ. ಅರುಣ್ ನನ್ನ ಎದೆಗೆ ಒದ್ದಿಲ್ಲ ಎಂದರೆ ಸರಿಯಲ್ಲ. ವೆಂಕಟೇಶಪ್ಪ ನನ್ನ ತಲೆಗೆ ಕಲ್ಲಿನಿಂದ ಹೊಡೆದಿಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ಗಾಯಗಳು ಆಗಿರಲಿಲ್ಲ ಎಂದರೆ ಸರಿಯಲ್ಲ. ಜಾತಿ ಹೆಸರಿನಲ್ಲಿ ಬೈದಿಲ್ಲ ಎಂದರೆ ಸರಿಯಲ್ಲ. ಮುಮಾ 1, 2 ರಲ್ಲಿ ನನಗೆ ಹೊಡೆದಿಲ್ಲ ಎಂದರೆ ಸರಿಯಲ್ಲ. ಅಲ್ಲಿರುವ ವೆಂಕಟೇಶಪ್ಪನ ಆಸ್ತಿಯನ್ನು ಅಕ್ರಮವಾಗಿ ಆಕ್ರಮಿಸಿಕೊಳ್ಳಲು ಅವರ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲು ಮಾಡಿಸಿದ್ದೇವೆಂದರೆ ೦ದರೆ ಸರಿಯಲ್ಲ. ಆರೊಪಿತರು ಯಾರೂ ಬೋವಿ ನನ್ನ ಮಕ್ಕಳಾ , ನಿಮ್ಮ ನ್ನು ಕೊಲೆ ಮಾಡಿ, ಸಾಯಿಸುತ್ತೇವೆಂದು , ಊರು ಬಿಟ್ಟು ಓಡಿಸುತ್ತೇವೆಂದು ಮಾತನಾಡಿಲ್ಲ ವತ್ತು ಹೆದರಿಸಿಲ್ಲ ಎಂದರೆ ಸರಿಯಲ್ಲ.

ಚೇತನ್ ಮಗ ಎಂದರೆ ಸರಿ, ಚರಣ್ ನನ್ನ ಮಗ ಎಂದರೆ ಸರಿ. ನಾಗರಾಜು ನನ್ನ ಅಣ್ಣ, ಚಂದ್ರು ನನ್ನ ಮಾವನ ಮಗ ಮತ್ತು ಸುಧಾಕರ್ ನಮ್ಮ ಸಂಬಂಧಿಕ ಎಂದರೆ ಸರಿ .

ಆರೋಪಿ ವೆಂಕಟೇಶಪ್ಪ ಹೆಂಡತಿ ಗ್ರಾಮ ಪಂಚಾಯಿತಿ ಸದಸ್ಯರು ಎಂದರೆ ಸರಿ. ಅವರು ಬಿ ಜೆ ಪಿ ಪಕ್ಷದವರು ಎನ್ನುವುದು ಗೊತ್ತಿಲ್ಲ. ನಾವು ಕಾಂಗ್ರೆಸ್ ಪಕ್ಷದವರು ಎನ್ನುವುದು ಸರಿಯಲ್ಲ. ಎಂ ಎಲ್ ಎ ರವರ ಪ್ರಭಾವವನ್ನು ಉಪಯೋಗ ಮಾಡಿಕೊಂಡು ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ಮಾಡಿಸಿದ್ದೇವೆಂದರೆ ಸರಿಯಲ್ಲ. ನನ್ನ ನೌಕರಿಯನ್ನು ಕಳೆಯುತ್ತೇವೆಂದು. ಊರಿನಿಂದ ಓಡಿಸುತ್ತೇವೆಂದು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ನಾನು ದೂರಿನಲ್ಲಿ ಹೇಳಿರುವುದಿಲ್ಲ. ಸಾಕ್ಷಿ ಮುಂದುವರೆದು ಎಲ್ಲಾ ಘಟನೆ ಆದ ನಂತರ ಅವರು ಈ ರೀತಿ ಬೆದರಿಕೆ ಹಾಕುತ್ತಿದ್ದರು ಎಂದು ನುಡಿಯುತ್ತಾರೆ. ಆರೋಪಿತರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಪ್ರಕರಣ ದಾಖಲು ಮಾಡಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತಗೊಳಿಸಲಾಗಿದೆ. )

ಓದಿ ಹೇಳಿ ಕೇಳಿ ಸರಿ ಇದೆ.

**ಸಹಿ/–**

(ಹೆಚ್. ದೇವರಾಜು )
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೋಲಾರ